(SRI A. G. RAMACHANDRA RAO.)

elucidate, I do not think is acceptable, nor to say that we should wait for better elucidation. I assure the House that I will give the best elucidation possible. Since the issue has already been decided. . . .

Sri J. MOHAMED IMAM.—Decided and forgotten.

Sri A. G. RAMACHANDRA RAO.—This is a thing which has already had the approval of the House. It is a simple thing. I am not opposed to this resolution being considered 15 days later. It does not matter much. However, I leave it to the House.

Sri J. MOHAMED IMAM.—There is only half an hour.

Sri K. PATTABHIRAMAN (Kolar).—Mr. Speaker, you know the mood in which we have already got into. If you please, we will take it up 15 days later.

Mr. SPEAKER.—All right. Is there any other measure ?

Sri A. G. RAMACHANDRA RAO.—There is another Resolution also.

Mr. SPEAKER.—The original Act has not been distributed.

Sri A. G. RAMACHANDRA RAO.—Because this House had accepted, it was not necessary to give copies.

Mr. SPEAKER.—We shall take up the discussion on the Five-Year Plan now.

---

## SECOND FIVE-YEAR PLAN.

### (Discussion continued.)

ಶ್ರೀ ಬಿ. ರಾಚಯ್ಯ (ಎಳಂದೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಎರಡನೆಯ ಪಾಂಚವಾರ್ಷಿಕ ಯೋಜನೆಯ ಕರಡು ಪ್ರತಿಯಮೇಲೆ ಮಾತನಾಡುತ್ತಾ, ಈ ಯೋಜನೆಯಲ್ಲಿ ಅಳವಡಿಸಿರತಕ್ಕ ಅಂಶಗಳು ಸಂಸ್ಥಾನಕ್ಕೆ ಅತ್ಯಗತ್ಯವಾಗಿ ಆಗಬೇಕಾಗಿರುವ ಎಲ್ಲ ಕೆಲಸಕಾರ್ಯಗಳನ್ನು ಒಳಗೊಂಡಿಲ್ಲವೆಂದು ಹೇಳುತ್ತಿದ್ದೆ. ಇಲ್ಲ ಅಳವಡಿಸಿರುವ ಎಲ್ಲ ಕೆಲಸ ಕಾರ್ಯಗಳಿಗೂ ಕೇವಲ ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟಂತೆ ೬೦ ಕೋಟಿ ರೂಪಾಯಿಗಳಿಗೆ ಮಿತಿಗೊಳಿಸಬೇಕು, ಅದಕ್ಕಿಂತ ಹೆಚ್ಚು ಮಾಡಬಾರದೆಂದು ಈ ವರದಿಯ ಮೊದಲನೆಯ ಅಧ್ಯಾಯದಲ್ಲಿ ಪ್ಲಾನಿಂಗ್ ಕಮಿಷನ್ನಿನವರು ತಿಳಿಸಿದ್ದಾರೆ. ಈ ದೃಷ್ಟಿಯಿಂದ ನಾನು ಹಿಂದಿನ ದಿವಸ ಮಾತನಾಡುತ್ತಾ ಎರಡು ಇಲಾಖೆಗಳ ವಿಷಯ ಹೇಳಿದೆ. ನಿಮ್ಮ ತರ ಗತಿಯವರ ಅಭಿವೃದ್ಧಿಯನ್ನು ಕಾರ್ಯಗತ ಮಾಡ ಬೇಕೆಂದು ಈ ಯೋಜನೆಯಲ್ಲಿ ಎರಡು ಕೋಟಿ ರೂಪಾಯಿ ಮೀಸಲಿಗಿಟ್ಟಿದ್ದಾರೆ, ಮತ್ತು ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗಾಗಿ ಕೊಟ್ಟಿರತಕ್ಕ ಸುಮಾರು ನಾಲ್ಕು ಕೋಟಿ ರೂಪಾಯಿಗಳನ್ನು ವಿನಿಯೋಗಿಸಿ ಕಾರ್ಯಗತ ಮಾಡುವಾಗ ಯಾವಯಾವ ಅಂಶಗಳು ಇಲ್ಲ ಅಡಕವಾಗಿಲ್ಲ ವೋ ಅವುಗಳನ್ನೂ ಸೇರಿಸಬೇಕೆಂದು ಹೇಳಿದ್ದೇನೆ. ರೇಷ್ಮೆ ಕೈಗಾರಿಕೆಯ ಸಂಬಂಧವಾಗಿ ಅತಿ ಮುಖ್ಯವಾದ ನಾಲ್ಕು ವಿಷಯ ಗಳನ್ನು ಮಾತ್ರ ತಿಳಿಸುತ್ತೇನೆ. ಮೊದಲನೆಯದಾಗಿ, ರೇಷ್ಮೆ ವ್ಯವಸಾಯಗಾರರಿಗೆ ರೋಗರಹಿತವಾದ ಮೊಟ್ಟೆಗಳನ್ನು ಸರಬರಾಯಿ ಮಾಡುವ ಒಂದು ಯೋಜನೆಯನ್ನು ಇಲ್ಲಿ ಅಳವಡಿಸಿದ್ದೀರಿ. ಈ ಕೆಲಸ ಎಷ್ಟು ಮಟ್ಟಿಗೆ ಈಗ ನಡೆಯುತ್ತಿದೆಯೆಂದರೆ, ಈಗಾಗಲೇ ಕಾನೂನು ಮಾಡಿದೆ. ಈ ಕಾನೂನಿನಲ್ಲಿರುವ ರೀತಿಯಲ್ಲಿ ರೋಗರಹಿತವಾದ ಮೊಟ್ಟೆಗಳನ್ನು ಏಡೆಡ್ ಗ್ರೇನೇಜುಗಳಿಂದ—ಸರ್ಕಾರಿ ಮತ್ತು ಖಾಸಗಿ ಗ್ರೇನೇಜುಗಳಿಂದ—ಹಂಚಬೇಕು. ನಮ್ಮ ಸಂಸ್ಥಾನಕ್ಕೆ ಬೇಕಾದ ರೋಗರಹಿತವಾದ ಮೊಟ್ಟೆ ಎಷ್ಟಿದೆ ಮತ್ತು ಈಗ ಶಿಕ್ಷಣ ಕೇಂದ್ರಗಳನ್ನಿಟ್ಟು ಅವುಗಳಿಂದ ಮೊಟ್ಟೆಗಳನ್ನು ಸರಬರಾಯಿ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ನೋಡಬೇಕು. ಇದನ್ನು ಇನ್ನೂ ಕಾರ್ಯ ಗತ ಮಾಡಿಲ್ಲ. ಮುಖ್ಯವಾಗಿ ಮೊಟ್ಟೆಯನ್ನು ಸರ ಬರಾಯಿ ಮಾಡಿದಾಗ ಯಾವಯಾವ ರೈತನಿಗೆ ಹೇಗೆ ಲಾಭ ದೊರೆಯುತ್ತದೆಯೆಂಬುದನ್ನು ತನಿಖೆಮಾಡಲು ಇನ್ಸ್ಪೆಕ್ಟರನ್ನಿಡಬೇಕು.

ಎರಡನೆಯದಾಗಿ, ರೇಷ್ಮೆ ವ್ಯವಸಾಯಗಾರರಿಗೆ ಸಬ್ ಸಿಡಿ ಮತ್ತು ಅಲ್ಪಕಾಲಾವಧಿ ಸಾಲಗಳನ್ನು ಕೊಡತಕ್ಕ ಯೋಜನೆಯನ್ನು ಕೂಡ ಈ ಯೋಜನೆಯಲ್ಲಿ ಅಳವಡಿಸಬೇಕೆಂದು ಹೇಳಿದ್ದೇನೆ. ಮೂರನೆಯ ದಾಗಿ, ಸರ್ಕಾರಿ ಕಕೂನ್ ಮಾರ್ಕೆಟ್ ಆಗಬೇಕು. ನಾಲ್ಕನೆಯದಾಗಿ ಚರಕ ತಿರುಗಿಸುವ ಜನರಿಗೆ ರೇಷ್ಮೆಯನ್ನು ಮಾರತಕ್ಕ ಸರ್ಕಾರಿ ಕೋರಿಗಳನ್ನು ಏರ್ಪಾಡು ಮಾಡುವುದಕ್ಕೆ ಈ ಯೋಜನೆಯಲ್ಲಿ ಅವಕಾಶವಿರ ಬೇಕೆಂದು ಸೂಚಿಸಿದ್ದೇನೆ. ಏನೇನು ಈ ಯೋಜನೆ ಯಲ್ಲಿರುವುದು ಕಾರ್ಯಗತವಾಗಬೇಕೆಂದು ಸರ್ಕಾರ ಉದ್ದೇಶಪಟ್ಟಿದ್ದಾರೋ ಅವುಗಳೆಲ್ಲಾ ಪೂರ್ಣವಾಗಿ ಕಾರ್ಯಗತವಾಗದೆ ಹಣದ ಅಭಾವದಿಂದ ಮಧ್ಯೆ ನಿಂತುಹೋಗಬಹುದೆಂದು ಶಂಕೆಕೂಡ ನನಗಿದೆ. ಏಕೆಂದರೆ, ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಏನೊಂದು ಯೋಜನೆಗಳನ್ನಿಟ್ಟುಕೊಂಡಿದ್ದೇವೋ ಆ ಯೋಜನೆಗಳೆಲ್ಲವೂ ಐದು ವರ್ಷಗಳಲ್ಲಿ ಕಾರ್ಯಗತವಾಗದೆ ಹಾಗೆಯೇ ಉಳಿದುಕೊಂಡಿವೆ. ಹಾಗೆ ಉಳಿದಿರುವ ಯೋಜನೆ ಗಳನ್ನು ಕಾರ್ಯಗತ ಮಾಡಲು ಈ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಣವನ್ನೊದಗಿಸ ಲಾಗಿದೆ. ಮೊದಲನೆಯ ಯೋಜನೆಯಲ್ಲಿ ಅರ್ಧದಲ್ಲಿ ಉಳಿದಿರುವ ಕೆಲಸಗಳನ್ನೆಲ್ಲಾ ಪೂರ್ತಿಮಾಡಬೇಕೆಂದು ಪ್ರಯತ್ನ ಪಟ್ಟದ್ದಾರೆ.

ಈಗ ನಾನು ನೀರಾವರೀ ಯೋಜನೆಯ ವಿಷಯ ದಲ್ಲಿ ಮಾತನಾಡಬೇಕೆಂದು ಉದ್ದೇಶ ಪಟ್ಟಿದ್ದೇನೆ. ಈ ಪಾಂಚವಾರ್ಷಿಕ ಯೋಜನೆಯಲ್ಲಿ ನೀರಾವರೀ ಯೋಜನೆಗಳನ್ನು ಮೈನರ್ ಇರಿಗೇಷನ್ ವರ್ಕ್ಸ್ ಮತ್ತು ಮೇಜರ್ ಇರಿಗೇಷನ್ ವರ್ಕ್ಸ್ ಎಂದು ಹೇಳಿ ಎರಡು ವಿಧವಾಗಿ ವಿಂಗಡಿಸಿದ್ದಾರೆ, ಮೊದಲನೆಯ ದಾದ ಮೈನರ್ ಇರಿಗೇಷನ್ ವರ್ಕ್ಸಿಗೆ ಎಂದು ಹೇಳಿ 10 ಲಕ್ಷಕ್ಕಿಂತ ಕಡಮೆ ಅಂದಾಜಾಗಿರತಕ್ಕ ಒಂದು ಸ್ಕೀಮನ್ನು ಮುಂದಿಟ್ಟಿದ್ದಾರೆ. ಇದರಲ್ಲಿ ಸುಮಾರು 50,000ಕ್ಕೆ ಜಾಸ್ತಿ ಇರತಕ್ಕವನ್ನು ಮಾತ್ರ ಸೇರಿಸಿದ್ದೇ

ವೆಂದು ಹೇಳಿದ್ದಾರೆ. ಅಂತೂ, ಒಟ್ಟು ಈ ಐದು ವರ್ಷಗಳಲ್ಲಿ ಸಣ್ಣ ಕಾಮಗಾರಿಗಳಿಗಾಗಿ ಸುಮಾರು 65 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದಾರೆ. ಇದರಿಂದಾಗಿ ಸುಮಾರು 60,000 ಎಕರೆಗಳು ನೀರಾವರಿಯಾಗುತ್ತವೆಂದು ಹೇಳಿದ್ದಾರೆ. ಆದರೆ, ಒಟ್ಟು ಈ 65 ಲಕ್ಷ ರೂಪಾಯಿಗಳನ್ನು ಯಾವ ರೀತಿ ವಿಂಗಡಿಸಿದ್ದಾರೆಂದು ನೋಡುವುದಾದರೆ, 1956-57ನೆಯ ಇಸವಿಗೆ 12 ಲಕ್ಷರೂಪಾಯಿಗಳನ್ನೂ, 1957-58ಕ್ಕೆ 14 ಲಕ್ಷ ರೂಪಾಯಿಗಳನ್ನೂ, 1958-59ಕ್ಕೆ 15 ಲಕ್ಷ ರೂಪಾಯಿಗಳನ್ನೂ, 1959-60ಕ್ಕೆ 12 ಲಕ್ಷ ರೂಪಾಯಿಗಳನ್ನೂ, 1960-61ಕ್ಕೆ ಒಟ್ಟಿಗೆ 65 ಲಕ್ಷರೂಪಾಯಿಗಳನ್ನೂ ಕೊಟ್ಟಿದ್ದಾರೆ. ಅಂದರೆ ಆಖೈರು ವರ್ಷದಲ್ಲಿ 1960-61ರಲ್ಲಿ ಬಹಳ ಹಣ ಒದಗಿಸಿಕೊಳ್ಳುವ ಭರವಸೆಯನ್ನಿಟ್ಟುಕೊಂಡಿರುವಂತೆ ಕಾಣುತ್ತದೆ. ಮೊದಲಿನ ನಾಲ್ಕು ವರ್ಷಗಳಲ್ಲಿ ಕ್ರಮವಾಗಿ, ನಿರಮಾನಾಗಿ ಖರ್ಚನ್ನು ಹಂಚಿಕೊಂಡು ಹೋಗುತ್ತಾ ಕೊನೆಯ ವರ್ಷಕ್ಕೆ ಬಂದ ತಕ್ಷಣವೇ ಹೆಚ್ಚಿಗೆ ಹಾಕಿರುವುದನ್ನು ನೋಡಿದರೆ, ಬಹುಶಃ ಈ ಯೋಜನೆಯನ್ನು ಮಾಡಿರುವವರ ಮನಸ್ಸಿನಲ್ಲಿ, ಈ ಯೋಜನೆಯನ್ನು ಈ ಅವಧಿಯಲ್ಲಿ ಪೂರೈಸಲು ಸಾಧ್ಯವಾಗದೆ ಹೋಗಬಹುದು, ಆಗ್ಗೆ ಇದೇ ಯೋಜನೆಯನ್ನು ಮುಂದಕ್ಕೆ ಹಾಕಬಹುದು ಎಂಬ ಉದ್ದೇಶವಿರುವಂತೆ ಕಾಣುತ್ತದೆ. ಹೀಗಿರುವುದರಿಂದ ಈ ಯೋಜನೆಯಲ್ಲಿ ಎಲ್ಲಿ ಸಣ್ಣಪಟ್ಟ ಯೋಜನೆಗಳೆಲ್ಲಾ ಕೈಬಿಟ್ಟು ಹೋಗುತ್ತವೆಯೋ ಎಂಬ ಹೆದರಿಕೆಯಿದೆ. ಆಲ್ಲದೆ ಇಲ್ಲಿ ನಾನಾ ಎಸ್ಟಿಮೇಟುಗಳ ವಿವರಗಳನ್ನೂ ಕೂಡ ತೋರಿಸಿಲ್ಲ. ಇಲಾಖೆಯವರು ಇನ್ನೂ work out ಮಾಡುತ್ತಿದ್ದಾರೆ; ಅವರಿಂದ ಬಂದ ಮೇಲೆ ತಿಳಿಸುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಈ ಮಾನ್ಯ ಸಭೆಯ ಗಮನಕ್ಕೆ ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗಿರುವ ಎರಡು ಮೂರು ಸಣ್ಣ ಯೋಜನೆಗಳನ್ನು ತರಬಯಸುತ್ತೇನೆ. ಒಂದು, ಸುವರ್ಣಾವತಿ ನದಿ ಮತ್ತು ಅದಕ್ಕೆ ಸಂಬಂಧಪಟ್ಟ ಬ್ಯಾಂಚ್ ಛಾನಲ್‌ಗಳ ಜೀರ್ಣೋದ್ಧಾರದ ವಿಷಯದಲ್ಲಿ, ಅವುಗಳ improvementನ ವಿಷಯದಲ್ಲಿ ಸರ್ಕಾರದವರು ಕಡೆಗಣ್ಣಿನಿಂದ ನೋಡುತ್ತಿದ್ದಾರೆಂದರೆ ತಪ್ಪಾಗಲಾರದು. ಕಳೆದ ಮೂರು ವರ್ಷದಿಂದ ನೆರಿಯಾಗಿ ಪ್ರಯತ್ನಪಟ್ಟಿದ್ದಲ್ಲಿ ಸುಮಾರು 13,000 ಎಕರೆಗಳು ನೀರಾವರಿಯಾಗ ತಕ್ಕಂಥಾದ್ದು. ಸರ್ಕಾರದವರು ಸಕಾಲಕ್ಕೆ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದುದರ ದೆಶೆಯಿಂದ ಅನೇಕ ಸಾರಿ ಪ್ರವಾಹ ಬಂದು, ನಾಲೆಗಳೂ ಸಂಬಂಧಪಟ್ಟ ಕೆರೆಗಳೂ ಒಡೆದು ಹೋಗಿ ಬತ್ತದ ಬೆಳೆಗೆ ನೀರೊದಗದೆ ಬಹಳವಾಗಿ ನಷ್ಟವಾಗಿದೆ. ದುಡ್ಡಿನ ಅಭಾವದಿಂದ ಇಂಥ ಸಣ್ಣ ಪುಟ್ಟ ನೀರಾವರಿ ಕಾಮಗಾರಿಗಳು ಎಲ್ಲಿ ಬಿಟ್ಟುಹೋಗುತ್ತವೆಯೋ ಎಂಬ ಹೆದರಿಕೆಯಿದೆ. ಆದ್ದರಿಂದ ಎಸ್ಟಿಮೇಟುಗಳನ್ನು ತಯಾರಿಸುವ ಸಂದರ್ಭದಲ್ಲಿ ಸುವರ್ಣಾವತಿಯ ನಾಲೆಗಳ ಜೀರ್ಣೋದ್ಧಾರದ ವಿಷಯವನ್ನು ಸೇರಿಸಿಕೊಂಡು ಈ 1,300 ಎಕರೆಗಳನ್ನು ನೀರಾವರಿಗೆ ತರಲು ಏನೇನು ಏರ್ಪಾಡು ಮಾಡಬೇಕೋ ಅದನ್ನು ಮಾಡಿ ಈ ಐದು ವರ್ಷದ ಯೋಜನೆಯಲ್ಲೇ ಸೇರಿಸಿ ನಡೆಸಿಕೊಡಬೇಕಾದದ್ದು ಅತ್ಯಗತ್ಯವೆಂದು ಹೇಳುತ್ತೇನೆ.

ಆಮೇಲೆ, ಮೇಜರ್ ಇರಿಗೇಷನ್ ಕಾಮಗಾರಿಗಳಲ್ಲಿ, ಹಾಲಿ ಆರು ಮೇಜರ್ ಇರಿಗೇಷನ್ ಕೆಲಸ ಕಾರ್ಯಗಳು ನಡೆಯುತ್ತಿವೆ. ಇವು ಇನ್ನೂ ಪೂರ್ತಿಯಾಗದಿರುವುದರಿಂದ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಅವುಗಳಿಗಾಗಿ ಹೆಚ್ಚು ಹಣವನ್ನು ಒದಗಿಸುವುದು ಅತ್ಯಾವಶ್ಯಕವಾಗಿದೆ. ಅದರಲ್ಲೂ ಹೊಸದಾಗಿ ತೆಗೆದುಕೊಂಡಿರುವ ಕಪಿನೀ ರಿಸರ್ವಾಯರ್ ಪ್ರಾಜೆಕ್ಟ್, ಮತ್ತು ಚಿಕ್ಕ ಹೊಳೆ ಪ್ರಾಜೆಕ್ಟ್‌ಗಳು 250 ಲಕ್ಷ ರೂಪಾಯಿಗಳಿಗೆ ಅಂದಾಜಾಗಿ ವಿದ್ಯುಚ್ಛಕ್ತಿಯ ತಯಾರಿಕೆಯನ್ನೂ ಒಳಗೊಂಡಿರುವುದರಿಂದ ಅವು ಬಹಳ ಪ್ರಾಮುಖ್ಯವಾದುದಾಗಿವೆ. ಅಂದಾಜು ಮಾಡಿರುವವರೂ ಈ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿರುವುದು ಶ್ಲಾಘನೀಯವಾಗಿದೆ. ಅದನ್ನು ಆದಷ್ಟು ಜಾಗ್ರತೆ ಮಾಡುವುದರಿಂದ, ಚಾಮರಾಜನಗರ ಮಳೆಯಿಲ್ಲದೆ ಬಹು ಕಷ್ಟಕ್ಕೊಳಗಾಗಿರತಕ್ಕಂಥಾದ್ದು ಬಹುಮಟ್ಟಿಗೆ ಉತ್ತಮಗೊಂಡು, ಆಗಾಗ್ಗೆ ಪ್ರವಾಹದ ಹೊಪೆತಕ್ಕೆ ಗುರಿಯಾಗುತ್ತಿದ್ದುದು ತಪ್ಪಿ ಸುಮಾರು ಎರಡು ಮೂರು ಸಾವಿರ ಎಕರೆಗಳು ಸಾಗಿಗೆ ಬರುವುದಲ್ಲದೆ ಈಗಿರತಕ್ಕ ಒಂದು ಸಾವಿರ ಎಕರೆಗಳಿಗೂ ನೀರಿನ ಭರವಸೆಯುಂಟಾಗುತ್ತದೆ. ಹೀಗಿರುವಲ್ಲಿ ಪ್ಲಾನಿಂಗ್ ಕಮಿಷನ್ನಿನವರೇನಾದರೂ ಇಂಥವುಗಳನ್ನಾವುದನ್ನಾದರೂ ಕೆಲವನ್ನು ತೆಗೆದುಬಿಡಬಹುದೆಂದು ಹೇಳಿ ಕೈಬಿಡುವುದಾದರೆ ಇಲ್ಲಿನ ಅನೇಕ ಜನರಿಗೆ ನಿರಾಶೆಯನ್ನುಂಟು ಮಾಡಿದಂತಾಗುತ್ತದೆ. ಇದು ಬಹಳ ದಿವಸದಿಂದ ಆಗಬೇಕಾದ ಕೆಲಸವಾಗಿದೆ. ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಆಹಾರವನ್ನು ಹೆಚ್ಚಿನ ರೀತಿಯಲ್ಲಿ ಉತ್ಪತ್ತಿ ಮಾಡುವುದಕ್ಕೂ ಮತ್ತು ಆಹಾರದ ಬಗ್ಗೆ ನಮ್ಮ ಸಂಸ್ಥಾನ ಸ್ವಯಂಪರಿಪೂರ್ಣತೆಯನ್ನು ಪಡೆಯುವುದಕ್ಕೂ ಏನೇನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಅದನ್ನು ಅಳವಡಿಸಿರುವುದು ಬಹಳ ಸಂತೋಷಕರವಾದುದು. ಆಹಾರವನ್ನು ಹೆಚ್ಚಿಗೆ ಬೆಳೆಸುವುದರ ಬಗ್ಗೆ ಅವರು ಅನೇಕ ಕಾರ್ಯಕ್ರಮಗಳನ್ನು ಸೂಚಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ಆಗಬೇಕಾಗಿರುವುದು soil conservation ಯೋಜನೆ. ವ್ಯವಸಾಯದ ಇಲಾಖೆಯವರು ಈ ಬಗ್ಗೆ ವಿಶೇಷ ಗಮನ ಕೊಡಬೇಕಾಗಿದೆ. ನಮ್ಮ ಸಂಸ್ಥಾನದಲ್ಲಿ ಎಷ್ಟೋ ಜಾತಿಯ ಮಣ್ಣುಗಳಿವೆ. ಯಾವ ಮಣ್ಣಿನಲ್ಲಿ ಏನು ಬೆಳೆ ಹಾಕಿದರೆ ಹೆಚ್ಚಿನ ರೀತಿಯಲ್ಲಿ ಉತ್ಪತ್ತಿ ಮಾಡಬಹುದು ಎಂಬ ಪರಿಶೋಧನೆಯನ್ನು ಈ ಇಲಾಖೆಯವರು ಅಗತ್ಯವಾಗಿ ಮಾಡಬೇಕಾಗಿದೆ. ಇಲ್ಲಿಯವರೆಗೂ ಇತ್ತಕಡೆ ಹೆಚ್ಚಿನ ಪ್ರೋತ್ಸಾಹ ದೊರಕಿಲ್ಲವೆಂದು ಹೇಳಬಹುದು. ಈಗಲಾದರೂ ಈ ಬಗ್ಗೆ ಸರ್ಕಾರದವರು ಕೊಟ್ಟಿರತಕ್ಕ ಹಣವನ್ನು ಅತ್ಯಗತ್ಯವಾಗಿ ಒದಗಿಸಬೇಕೆಂದು ಹೇಳುತ್ತೇನೆ.

ಹಾಗೆಯೇ, grant of Government lands for cultivation ವಿಚಾರ. ಸರ್ಕಾರದವರು ಇತ್ತೀಚೆಗೆ ಒಂದು ಹುಕುಂ ಹೊರಡಿಸಿ ಸರ್ಕಾರಿ ಜಮೀನುಗಳು ಎಲ್ಲೆಲ್ಲಿವೆಯೋ,—ಗೋಮಾಳ, ಈಚಲುವನ ಮತ್ತು ರಿಸರ್ವ್ ಮಾಡದಿರುವುದು ಬಿಟ್ಟು—ಉಳಿದುವೆಲ್ಲವನ್ನೂ ಅಮಲ್ದಾರರುಗಳು, ಸಬ್ ಡಿವಿಜ್ ಆಫೀಸರುಗಳು ಮತ್ತು ಡೆಪ್ಯುಟಿ ಕಮಿಷನರುಗಳು ಅವರಿಗೆ ಕೊಟ್ಟಿರತಕ್ಕ ಮಿತಿಗೊಳಪಟ್ಟು ಜಮೀನು ಕೊಡುವ ಏರ್ಪಾಡು ಮಾಡಿರುವುದು ಜಮೀನಿಲ್ಲದ ರೈತರ ಹಿತದೃಷ್ಟಿಯಿಂದ ಬಹಳ ಪ್ರಾಮುಖ್ಯವಾದುದಾಗಿದೆ. ಜಮೀನಿಲ್ಲದ ಬಡ ವ್ಯವಸಾಯಗಾರರಿಗೆ ಅತಿ ಶೀಘ್ರವಾಗಿ ಜಮೀನು ಸಿಕ್ಕುವ ಅನುಕೂಲ ದೊರಕಿಸಿರುವುದು ಮಹದುಪಕಾರ ಮಾಡಿದಂತಾಗಿದೆ.

ಹೀಗೆ ಹೆಚ್ಚಿನ ರೀತಿಯಲ್ಲಿ ನೀರಾವರಿ ವ್ಯವಸಾಯವನ್ನೂ ಜಾಸ್ತಿ ಮಾಡಲು ಸರ್ಕಾರದವರು ಒಂದು

(ಶ್ರೀ ಬಿ. ರಾಚಯ್ಯ.)

ಹುಕುಂ ಹೊರಡಿಸಿ ಅದನ್ನು ಕಾರ್ಯಗತವಾಗುವಂತೆ ಈ ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕೆಂದು ಸೂಚಿಸುತ್ತೇನೆ. ಇದೇ ಸಂದರ್ಭದಲ್ಲಿ ಜನರು ಹೋಗಿ ನೆಲೆಸಲು ಆಲ್ಲಲ್ಲಿ ಅನುಕೂಲವಾಗಿ ಜಮೀನಿರತಕ್ಕ ಕಡೆಗಳಲ್ಲಿ ವ್ಯವಸಾಯದ ಕಾಲೊನಿಗಳನ್ನು ಸರ್ಕಾರದವರು ಪ್ರಾರಂಭಿಸಬೇಕೆಂದು ಸೂಚನೆ ಮಾಡುತ್ತೇನೆ. ಇದು ತೀರ ಅವಶ್ಯಕ. ಈಗ ತಾವು ಈ ಫೈನಾನ್‌ಷಿಯಲ್ ಮೆಮೋರಾಂಡಂನಲ್ಲಿ ಏನು ತಿಳಿಸಿದ್ದೀರೋ ಅದು ಸಾಲದು. ನಮ್ಮಲ್ಲಿರತಕ್ಕ ಹಣದ ವರಮಾನವೆಷ್ಟು ಎಂಬುದನ್ನು ನೋಡಿಕೊಂಡು, ಕೇಂದ್ರ ಸರ್ಕಾರದವರು ಸಾಲದ ರೂಪವಾಗಿ ಕೊಡಬೇಕೆಂದಿರುವ ಮೊಬಲಗನ್ನು ಗ್ರಾಟ್ ರೂಪವಾಗಿ ಒದಗಿಸುವಂತೆ ಸರ್ಕಾರದವರು ಕೇಂದ್ರದವರಿಗೆ ಒತ್ತಾಯ ಪಡಿಸುವುದು ಅಗತ್ಯವಾಗಿದೆ. ಈಗ ಕೇಂದ್ರದಿಂದ ನಮಗೆ ಅವರು ಎಷ್ಟರಮಟ್ಟಿಗೆ ನೆರವಾಗುತ್ತಾರೆಂಬ ವಿಷಯವನ್ನು ವಿಶದಪಡಿಸಿಲ್ಲ. ಈಗ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ 85 ಕೋಟಿ ರೂಪಾಯಿಗಳ ಖರ್ಚು ತಗಲುವಷ್ಟು ಯೋಜನೆಗಳನ್ನು ಇದರಲ್ಲಿ ಅಡಕಮಾಡಿದ್ದಾರೆ. ಈ ಸಂಬಂಧದಲ್ಲಿ ಆಗತಕ್ಕ ಖರ್ಚು ವೆಚ್ಚಗಳು 85 ಕೋಟಿಗೆ ಮೀರದಂತಿರಬೇಕೆಂದು ಪ್ಲಾನಿಂಗ್ ಸಮಿತಿಯವರು ಒಂದು ನಿರ್ಬಂಧವನ್ನು ಹಾಕಿರುತ್ತಾರೆ. ಆದರೆ ಈಗ ಈ ಯೋಜನೆಯಲ್ಲಿ ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ಅಭಿವೃದ್ಧಿಪಡಿಸುವ ಮತ್ತು ನಗರಗಳ ನೀರಿನ ಸರಬರಾಜು ಮಾಡುವ ಈ ಎರಡು ಕಾರ್ಯಗಳನ್ನೂ ಕೇಂದ್ರದವರು ನಡೆಸುವುದಾಗಿ ತಿಳಿಸಿದೆ. ಈ ಸಂಬಂಧದಲ್ಲಿ ಭದ್ರಾವತಿಗಾಗಿ 11 ಕೋಟಿ ರೂಪಾಯಿಗಳನ್ನು ಕೊಡುವುದಾಗಿ ತಿಳಿಸಿದೆ. ಇದೊಂದು ಹೆಮ್ಮೆಪಡುವಂಥ ವಿಚಾರ. ಇನ್ನು ನಗರಗಳ ನೀರಿನ ಸರಬರಾಜು ವ್ಯವಸ್ಥೆಗೆ ನಾಲ್ಕು ಕೋಟಿ ರೂಪಾಯಿಗಳನ್ನು ಈ ಯೋಜನೆಯಲ್ಲಿ ಒದಗಿಸಲು ಒಪ್ಪಿಕೊಂಡಿದ್ದಾರೆ. ಆದರೆ ಕೇವಲ ನಗರಗಳಿಗೆ ಮಾತ್ರ ಈ ಯೋಜನೆಯನ್ನು ಅನ್ವಯಿಸದೆ ಗ್ರಾಮಾಂತರ ಪ್ರದೇಶಗಳಲ್ಲಿ ಸಹ ಕುಡಿಯುವ ನೀರಿನ ಯೋಜನೆಗೆ ಕೇಂದ್ರದವರೇ ಸಂಪೂರ್ಣ ಸಹಾಯ ನೀಡುವಂತೆ ಅವರನ್ನು ತಾವು ಒಪ್ಪಿಸಬೇಕಾಗಿದೆ. ಆದರೆ ಹೀಗೆ ಕೇವಲ ನಗರಗಳ ವಿಚಾರಕ್ಕೆ ಮಾತ್ರವೇ ಇದನ್ನು ಅನ್ವಯಿಸುವಂತೆ ಆ ಫ್ಲಾನಿಂಗ್ ಸಮಿತಿಯವರು ಹೇಳಿರತಕ್ಕದ್ದು ಸರಿಯಾದುದಲ್ಲ. ಈಗಾಗಲೇ ನಮ್ಮ ಸಂಸ್ಥಾನದಿಂದ ಕೇಂದ್ರ ಸರ್ಕಾರಕ್ಕೆ ಇಕಂಟ್ಯಾಕ್ಸ್, ರೈಲ್ವೆ ಮತ್ತು ಸೆಂಟ್ರಲ್ ಎಕ್ಸೈಜ್ ಈ ಬಾಬುಗಳಿಂದ ವಿಶೇಷ ಹಣ ಉತ್ಪತ್ತಿ ಆಗುತ್ತಿದೆ. ಆದರೆ ಇದಕ್ಕೆ ತಕ್ಕಷ್ಟು ರಿಟರ್ನ್ ಅವರಿಂದ ನಮಗೆ ಬರುತ್ತಿಲ್ಲ. ಆದುದರಿಂದ ಈಗ ತಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಹಾಕಿ ಹಿಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಯೆಸದೆ ಇರುವಂಥ ಕಲಸಗಳೂ ಮತ್ತು ಈ ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಬೇಕಾಗಿರುವ ಕಾರ್ಯಗಳ ಬಗ್ಗೆ ಹೆಚ್ಚಿನ ಸಹಾಯವನ್ನು ಗ್ರಾಂಟ್ಸ್ ರೂಪದಲ್ಲಿ ಪಡೆಯಲೇಬೇಕು. ಇಲ್ಲವಿದ್ದರೆ ನಮಗೆ ಈ ಕಾರ್ಯಗಳಿಗೆಲ್ಲಾ ಹಣವನ್ನೊದಗಿಸಿಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತದೆ. ಇಂಡಿಯಾ ಸರ್ಕಾರದವರು ಇತರ ಸ್ಟೇಟುಗಳಿಗೆ ಯಾವ ರೀತಿ ಧನಸಹಾಯ ಮಾಡಿರುತ್ತಾರೋ ನಮಗೂ ಹಾಗೆ ಸಹಾಯ ಮಾಡುವುದರ ಜೊತೆಗೆ ಸಾಲ ತೆಗೆದುಕೊಳ್ಳುವುದರ ಬದಲು ಆ ಹಣವನ್ನೂ ಸಹ ಗ್ರಾಂಟ್ ರೂಪವಾಗಿಯೆ ಪಡೆಯಬೇಕೆಂದೂ, ಈಗ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಯಾವ ಒಂದು ಐಟಮ್ಮನ್ನೂ ಕೈಬಿಡದಂತೆ ಸರ್ಕಾರದವರು ತಮ್ಮ ಕೈಲಾದ ಎಲ್ಲ ಪ್ರಯತ್ನಗಳನ್ನೂ ನಡೆಸಬೇಕೆಂದೂ ಸೂಚಿಸಿ ನಾನು ಈ ವರದಿಯನ್ನು ಸ್ವಾಗತಿಸುತ್ತೇನೆ.

Mr. SPEAKER.—Now the House adjourns. . . .

Sri A. BHEEMAPPA NAIK.—What about the date of the next session ?

Mr. SPEAKER.—The date will be communicated. Now the House adjourns *sine die*.

---

*The House adjourned* sine die *at Twenty-Five Minutes past Twelve of the Clock.*

---